ಸಂಬಂಧಗಳು ಮತ್ತು ಸಾವು ಎಂಬ ತ್ರಿಕೋನದೊಳಗೇ ದಕ್ಕುತ್ತ ಹೋಗುವ ಪರಿ, ಏಕಕಾಲಕ್ಕೆ ಸತ್ಯದತ್ತಲೂ, ಕಲೆಯತ್ತಲೂ ಕಣ್ಣಿಟ್ಟು ಚಲಿಸುವ ಮಹಾಯಾನವಾಗಿದೆ.

ಹಾಗೆಯೇ, ಯಾವುದೇ ಒಂದು ವಿಪತ್ತು ಎರಗಿದಾಗ ಸಹಜವಾಗಿಯೇ ಮನುಷ್ಯ ಕಾರ್ಯ–ಕಾರಣ ಸಂಬಂಧದ ಶೋಧಕ್ಕಿಳಿಯುತ್ತಾನೆ. ಅಲ್ಲಿಯೇ ಅವನು ಕರ್ಮಸಿದ್ಧಾಂತದ ಸುಳಿಗೂ ಸಿಲುಕುವುದು. 'ಪ್ಲೇಗ್' ಕಾದಂಬರಿಯೂ ಅದಕ್ಕೆ ಹೊರತಾಗಿಲ್ಲ. ಫಾದರ್ ಪೆನೆಲೊ ಈ ಆಯಾಮದ ಕೇಂದ್ರವಾಗಿದ್ದಾನೆ. ಇದಕ್ಕೆ ಸಂವಾದಿಯಾಗಿ ತಾಹು ಮತ್ತು ಅವನ ವಿಚಾರಗಳಿವೆ. ಈ ಕಾದಂಬರಿಯ ಆತ್ಮದಂತಹ ಒಂದು ಅಧ್ಯಾಯ ಪುಟ 202–209ರಲ್ಲಿದೆ. ಮನುಕುಲಕ್ಕೇ ಒದಗುವ ವಿಪತ್ತು ಮನುಷ್ಯನ ಸಂವೇದನೆಗಳಲ್ಲಿ ಉಂಟುಮಾಡುವ ಪಲ್ಲಟವನ್ನು ಗುರುತಿಸಲು ಯತ್ನಿಸುವ ಈ ಅಧ್ಯಾಯ ಮಹತ್ವದ ಒಳನೋಟಗಳನ್ನು ಹೊಂದಿದೆ. ಅದೇ ರೀತಿ ನಿಗೂಢ ಅಪರಾಧಿಯಾದ ಕೊತಾ, ತಾನು ಬದುಕನ್ನು ಪೂರ್ತಿಯಾಗಿ ಅರಿತಿದ್ದೇನೆ ಎನ್ನುವ ತಾಹು ಮತ್ತು ಗೂರಲು ಕೆಮ್ಮಿನ ಮುದುಕ ಮೂವರ ವಿಚಾರಧಾರೆಯಲ್ಲಿಯೂ ಒಂದು ಸಾಮ್ಯತೆಯಿರುವುದು ಮತ್ತು ಅವರು ಪ್ಲೇಗನ್ನು ಒಂದು ಸಹಜ ವಿದ್ಯಮಾನವೆಂಬಂತೆ ಸ್ವೀಕರಿಸಿ ಅದರೊಂದಿಗೆ ಬದುಕಬೇಕೆಂಬ ಅನಿಸಿಕೆ ಹೊಂದಿರುವುದನ್ನು ಗಮನಿಸಬೇಕು. ಕೊತಾಗೆ ಅದು ಒಂದು ರಕ್ಷೆಯಂತೆ ಒದಗಿದರೆ, ತಾಹುಗೆ ಅದೊಂದು ಮನುಷ್ಯತ್ವಕ್ಕಂಟಿದ ರೋಗ. ಮುದುಕನಿಗೋ ಅದೇ ಜೀವನ, ಪರಿಹಾರವಿಲ್ಲದ, ಮುಕ್ತಿಯಿಲ್ಲದ ಹೊರೆಕಾಣಿಕೆ!

ಎಚ್.ಎಸ್. ರಾಘವೇಂದ್ರ ರಾವ್ ಅವರ ಅನುವಾದ ಸುಲಲಿತ ಓದಿಗೆ ಪೂರಕವಾಗಿ ಸಾಗುತ್ತದೆ. ಒಂದು ಅನುವಾದವನ್ನು ಓದುತ್ತಿದ್ದೇವೆಂಬ ಪ್ರಜ್ಞೆ ಹಿನ್ನೆಲೆಗೆ ಸರಿಯುವಷ್ಟು ಅವರ ಕೃತಿಯ ಕನ್ನಡತನ ಅಚ್ಚುಕಟ್ಟಾಗಿದೆ, ಸಮೃದ್ಧವಾಗಿದೆ. ಆದರೆ, ಅದೇ ಕಾಲಕ್ಕೆ ಮೂಲದ ಒಂದು ಓಘವನ್ನು ಸಪ್ರಯತ್ನ ಉಳಿಸಿಕೊಳ್ಳಲು ಹೊರಟಂತೆಯೂ ಕಾಣುತ್ತದೆ. ಲಭ್ಯವಿರುವ ಎರಡೂ ಇಂಗ್ಲಿಷ್ ಆವೃತ್ತಿಗಳನ್ನು ಇಟ್ಟುಕೊಂಡು, ಅಗತ್ಯಬಿದ್ದಾಗ ಮೂಲವನ್ನೂ ಗಮನಿಸಿ ತಾವು ಅನುವಾದಿಸಿದ್ದಾಗಿ ಅವರು ಹೇಳಿದ್ದಾರೆ. ಕಾದಂಬರಿಯ ಆರಂಭದ ಅಧ್ಯಾಯದಲ್ಲೇ ಬರುವ **discomfort in dying** ಎನ್ನುವಲ್ಲಿ ಎಚ್ಚೆಸ್ಸಾರ್ ಅವರು ಸರಳವಾಗಿ 'ಕಿರಿಕಿರಿ' ಎಂಬ ಶಬ್ದ ಬಳಸಿಬಿಡುತ್ತಾರೆ. ಈ 'ಕಿರಿಕಿರಿ' ಎಂಬ ಶಬ್ದದಲ್ಲೇ ಇರುವ **discomfort** ಗಮನಿಸಿ! ಬಹುಶಃ ಅವರು ಇದರ ಹೊರತಾಗಿ ಬೇರೆ ಯಾವ ಶಬ್ದ ಬಳಸಿದ್ದರೂ ಓದುಗನಿಗೆ ನಿಜವಾದ ಕಿರಿಕಿರಿಯೇ! ಹಾಗೆಯೇ, **cloying perfume** ಇಲ್ಲಿ ಸಿಹಿವಾಸನೆಯಾಗಿದೆ! **'the sour 'Good night, father,' she flung at him over her shoulder'** ಇಲ್ಲಿ 'ಒಣದನಿಯಲ್ಲಿ ಬಿಸಾಕುತ್ತಿದ್ದ, 'ಗುಡ್ ನೈಟ್ ಫಾದರ್' ಆಗಿ ಜೀವ ತಳೆಯುತ್ತದೆ. ಈ ಬಿಸಾಕಬಹುದಾದ ಗುಡ್ ನೈಟು, ಮಾರ್ನಿಂಗುಗಳ ಭಾರವನ್ನು ಬಲ್ಲವರೇ ಬಲ್ಲರು! ಅಲ್ಲಲ್ಲಿ ಎಲೆಮರೆಯ ಹೂವಿನಂತೆ ದಕ್ಕುವ 'ವಾಗ್ಮಿತೆ', 'ತುಟಿಮರುಕ', 'ನರಳುಗಾಳಿ', 'ಪರಟೋಣಿ', 'ಕಸುಬಿಷ್ಟೆ' ಮುಂತಾದ ಪ್ರಯೋಗಗಳನ್ನು ನಾವು ಸೂಕ್ಷ್ಮವಾಗಿ ಗಮನಕ್ಕೆ ತಂದುಕೊಳ್ಳದೇ ಹೋದರೆ ಈ ಅನುವಾದದ ನಿಜವಾದ ಸೊಗಡು ನಮ್ಮ ಅರಿವಿಗೇ ಬರುವುದಿಲ್ಲ.

ಈ ಕಾದಂಬರಿ ಹಲವಾರು ಕಾರಣಗಳಿಗಾಗಿ ಮುಖ್ಯವಾಗುವ ಒಂದು ಅಪರೂಪದ ಕೃತಿ. ಸಾಹಿತ್ಯದ ವಿದ್ಯಾರ್ಥಿಗಳಿಗೂ, ತತ್ವಶಾಸ್ತ್ರದ ಜಿಜ್ಞಾಸುಗಳಿಗೂ, ಮನಃಶಾಸ್ತ್ರದ ಅಭ್ಯಾಸಿಗಳಿಗೂ, ಕರ್ಮಸಿದ್ಧಾಂತದ ಪ್ರತಿಪಾದಕರಿಗೂ, ಬದುಕು ಮತ್ತು ಮನುಷ್ಯನ ಕುರಿತು ಅರಿಯಬಯಸುವ, ಚೆನ್ನಾಗಿ ಬದುಕುವ ಹಾದಿಯೊಂದನ್ನು ಕಂಡುಕೊಳ್ಳಬಯಸುವ ಸಾಮಾನ್ಯ ಓದುಗರಿಗೂ ಸಮಾನವಾಗಿ, ಸಮೃದ್ಧವಾಗಿ ದಕ್ಕುವ ಕೃತಿ. ಇದನ್ನು ಅಚ್ಚುಕಟ್ಟಾಗಿ ಕನ್ನಡಕ್ಕೆ ತಂದ ಎಚ್ಚೆಸ್ಸಾರ್ ಅಭಿನಂದನಾರ್ಹರು.